


## ಮತ್ತೆ ಚಿಮ್ಮಿತು ಬೆಂಕಿ-ಬೆಳಕು

ಅಮೆರಿಕದ ಲಾಸ್ ವೆಗಾಸ್ ನಗರ ಜೂಜಿನ ಅಡ್ಡೆಗಳಿಗೆ ಪ್ರಸಿದ್ಧವಾದುದು. ಅಲ್ಲಿನ ಕ್ಯಾಸಿನೊಗಳಿಗೆ ವಿಶ್ವದ ವಿವಿಧ ಭಾಗಗಳಿಂದ ಜೂಜುಕೋರರು ಬರುತ್ತಾರೆ. ಈ ವರ್ಣರಂಜಿತ ನಗರದ ‘ಮಿರಾಜ್ ಹೋಟೆಲ್ ಅಂಡ್ ಕ್ಯಾಸಿನೊ’ದ ಮುಂಭಾಗದಲ್ಲಿನ ಈ ಬೆಳಕಿನ ಚಿತ್ರಾವಳಿಯನ್ನು ನೋಡಿದರೆ ದೀಪಾವಳಿಯ ಸಂಭ್ರಮ ನೆನಪಾಗುತ್ತದೆ. ಆದರಿದು, ಪ್ರವಾಸಿ ಆಕರ್ಷಣೆಯ ಜ್ವಾಲಾಮುಖಿ. ‘ಕೋವಿಡ್–19’ರ ಕಾರಣದಿಂದಾಗಿ ಬಾಗಿಲು ಮುಚ್ಚಿದ್ದ ಹೋಟೆಲ್–ಕ್ಯಾಸಿನೊ ಮತ್ತೆ ಗ್ರಾಹಕರನ್ನು ಬರಮಾಡಿಕೊಳ್ಳುವ ಸಿದ್ಧತೆಯಲ್ಲಿರುವ ಸಂದರ್ಭದಲ್ಲಿ ಈ ಜ್ವಾಲಾಮುಖಿ ಚಿತ್ತಾರ ಪ್ರವಾಸಿಗರನ್ನು ಸೆಳೆಯುವಂತಿದೆ. ಭಾರತದ ತಬಲಾ ಮಾಂತ್ರಿಕ ಜಾಕೀರ್ ಹುಸೇನ್ ಅವರ ಸೌಂಡ್ ಟ್ರ್ಯಾಕ್ ಕೂಡ ಈ ಚಿತ್ತಾಪಹಾರಿ ಬೆಳಕಿನ ಸಂಯೋಜನೆಯ ಭಾಗವಾಗಿದೆ. ಚಿತ್ರ: ಎಎಫ್‌ಪಿ